ಕ್ಲೋಸ್‌ಪೇಟೆ ಸಬ್ ಡಿವಿಜ್ ಆಫೀಸಿನಿಂದ.

ನೋಟಿಫಿಕೇಷ್ನ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಸಬ್ ಡಿವಿಜ್ ಮಜಕೂರು ಬಾಬತು ಜೋಡಿ, ಖಾಯಂಗುತ್ತ, ಇನಾಂ, ಸರ್ವಮಾನ್ಯ ವಗೈರೆ ಗಾವುಗಳ ಶೇಂದಿ ಹಕ್ಕಿನ ವಿಷಯದಲ್ಲಿ ಕ್ಲೋಸ್‌ಪೇಟೆ ಮೊಕ್ತಾಂನಲ್ಲಿ 1909ನೆ ಮೇ ತಾರೀಖು 25ರಲ್ಲು ವಿಚಾರಣೆ ಮಾಡಲ್ಪಡುತ್ತೆ.

ತಪಶೀಲು ಬಗ್ಯೆ 1909ನೆ ಇಸವಿ ಏಪ್ರಿಲ್ 15ನೆ ಮಾರ್ಚ್ಂ 15ನೆ ನಂಬರ್ ಮೈಸೂರು ಗೆಜೆಟ್ 2ನೆ ಭಾಗದ 209ನೆ ನಂಬರ್ ಪೇಜು ನೋಡಿ.

ಬಿ. ವೆಂಕೋಬರಾವ್,
ಸಬ್ ಡಿವಿಜ್ ಆಫಿಸರ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋ ಟಿ ಸ್.

ತಾರೀಖು 27ನೆ ಮಾರ್ಚ್ 1909.

1906ನೆ ಇಸವಿ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ ಪ್ರಕರಣದ ಎರಡನೆ ಉಪಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟ ಮ್ಯುನಿಸಿಪಲ್ ಸಭೆಯವರಿಂದ ಮಂಜೂರು ಹೊಂದಿರುವಂಥ ಕೆಳಗೆ ಕಾಣಿಸಿರುವ ಉಪನಿಬಂಧನೆಗಳನ್ನು 1909ನೆ ಇಸವಿ ಜುಲೈ ಗುರ್ಯೇ ತಾರೀಖು ಲಾಗಾಯಿತು ಜಾರಿಗೆ ತರುವ ವಿಷಯದಲ್ಲಿ ಯಾವವಿಧವಾದ ಆಕ್ಷೇಪಣೆಗಳು ಇದ್ದಲ್ಲಿ ಆಲೋಚಿಸ ಲಾಗುವುದು.

I. 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇಷನಿನ 48ನೆ (ಸಿ) ಪ್ರಕರಣಕ್ಕನುಸಾರವಾಗಿ ಮಾಡಲ್ಪಟ್ಟ ರೊಟ್ಟಿ ಗಡಂಗು, ಮತ್ತು ಮಿಠಾಯಿ ಅಂಗಡಿಗಳಿಗೆ ಸಂಬಂಧವಾದ ಮಸೂದೆ ಉಪನಿಬಂಧನೆಗಳು.

(1) ಪ್ರಸಿಡೆಂಟರವರಿಂದ ವಾರ್ಷಿಕ ಲೈಸೆನ್ಸು ಪಡಿಯದೆ ಯಾವ ಸ್ಥಳವನ್ನು ರೊಟ್ಟಿ ಗಡಂಗಿಗಾಗಲಿ ಅಥವಾ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸಲ್ಪಡಲಾಗದು.

(2) ಕಟ್ಟಡವು ವಿಸ್ತಾರವಾಗಿಯೂ ತಕ್ಕದ್ದಾಗಿಯೂ ಇದ್ದ ವಿನಹ ರೊಟ್ಟಿ ಗಡಂಗಿಗಾಗಲಿ ಮಿಠಾಯಿ ಅಂಗಡಿಗಾಗಲಿ ಉಪಯೋಗಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡುವದಿಲ್ಲ.

II. (1) ವಾರ್ಷಿಕ ಲೈಸೆನ್ಸನ್ನು ಕೇಳಿಕೊಳ್ಳುವದಕ್ಕೆ ಮುಂಚಿತವಾಗಿ ಕಟ್ಟಡದಲ್ಲಿನ ಉಪಯೋಗಕ್ಕಾಗಿ ನೀರಿನ ನಲ್ಲಿಯನ್ನು ಇಡಿಸಿಕೊಳ್ಳಲು ಹಾಗೆ ಇಡಿಸಿದ ನಲ್ಲಿಯನ್ನು ಅದಕ್ಕೆ ಸಂಬಂಧಿಸಿದ ಎಲ್ಲ ಅಜಬಾಬುಗಳನ್ನು ಸರಿಯಾಗಿಯೂ ಸಾರ್ವದಾ ಉಪಯೋಗಿಸುವ ಸ್ಥಿತಿಯಲ್ಲಿಯೂ ಇಟ್ಟುಕೊಂಡಿರಬೇಕು. ಕಟ್ಟಡವನ್ನು ಚೆನ್ನಾಗಿ ತೊಳೆದು ಶುಚಿಯಾಗಿ ಇಟ್ಟುಕೊಂಡಿರುವದಕ್ಕೆ ಅವಶ್ಯವಾದಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕು.

III. (1) ಪ್ರತಿ ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಗೋಡೆಗಳಿಗೆ ತ್ಯಾವ ಸೇರಕೊಡದಂತೆ ನೆಲದಮಟ್ಟದಿಂದ ನಾಲ್ಕಡಿ ಎತ್ತರದ ವರಿಗೆ ಸಿಮೆಂಟಿನಿಂದ ಗಾರೆ ಮಾಡಿಸಿರತಕ್ಕದ್ದು, ಮತ್ತು ಮಿಕ್ಕ ಭಾಗಕ್ಕೆಲ್ಲ ಸುಣ್ಣದಿಂದ ಇಲಾಯಿ ಮಾಡಿಸಿ ಸುಣ್ಣ ಬಳಿಸಬೇಕು. ಸದರಿ ಕಟ್ಟಡದ ನೆಲವು ಸಂಪೂರ್ತಿಯಾಗಿ ಸಿಮೆಂಟಿನಿಂದ ಗಾರೆ ಮಾಡಿಸಲ್ಪಟ್ಟಿರತಕ್ಕದ್ದು. ಅಥವಾ ಕಡಪ ಕಲ್ಲುಗಳು ಹಾಸಲ್ಪಟ್ಟು ಸಿಮೆಂಟು ಗಾರೆ ಮಾಡಿಸಿರಬೇಕು.

(2) ರೊಟ್ಟಿ ಗಡಂಗಿನ ಅಥವಾ ಮಿಠಾಯಿ ಅಂಗಡಿಯ ಯಾವ ಭಾಗವೂ ಪಾಯಿಖಾನೆಗಂಡಿ ಅಥವಾ ಕಕ್ಕಸಿನ 30 ಅಡಿಗಳಿಗಿಂತ ಕಮ್ಮಿಯಾದ ಫಾಸಲೆಯಲ್ಲಾಗಲಿ ಅಥವಾ ದುರ್ವಾಸನೆ ಹೊಡಿಯತಕ್ಕ ಸ್ಥಿತಿಯಾದ ಪ್ರದೇಶದಲ್ಲಿರಕೂಡದು.

IV. ರೊಟ್ಟಿ ಗಡಂಗಿನ ಬಗ್ಗ್ಯೆ ಮತ್ತು ಮಿಠಾಯಿ ಅಂಗಡಿಯ ಬಗ್ಗ್ಯೆ ಉಪಯೋಗಿಸಲ್ಪಡುವ ಸ್ಥಳವನ್ನ ಇತರ ಮತ್ಯಾವ ಉದ್ದೇಶಕ್ಕೂ ಉಪಯೋಗಿಸಕೂಡದು.

V. ಎಲ್ಲಾ ಪಾತ್ರೆಗಳು ಮತ್ತು ಇತರ ಸಾಮಾನುಗಳು ಶುಭ್ರವಾಗಿ ಇಡಲ್ಪಟ್ಟಿರಬೇಕು.

VI. ರೊಟ್ಟಿ ಮತ್ತು ಮಿಠಾಯಿ ತಯಾರಿ ಬಗ್ಗೆ ಉಪಯೋಗಿಸಲ್ಪಡುವ ಹಿಟ್ಟು, ಸಕ್ಕರೆ, ತುಪ್ಪ, ನೀರು, ಮತ್ತು ಇತರ ಪದಾರ್ಥಗಳು ಉತ್ತಮವಾದ್ದಾಗಿಯೂ ಆರೋಗ್ಯಕರವಾಗಿಯೂ ಇರಬೇಕು. ಹಿಟ್ಟು ಮತ್ತು ಸಕ್ಕರೆ ದಾಸ್ತಾನಿನ ಬಗ್ಗೆ ಪ್ರತ್ಯೇಕವಾದ ಉಗ್ರಾಣ ಅಥವಾ ಪಾತ್ರೆ (ಆಕಯ) ಉಂಟಾಗಿರತಕ್ಕದ್ದು ಮತ್ತು ಹಿಟ್ಟನ್ನಾಗಲಿ ಅಥವಾ ಸಕ್ಕರೆಯನ್ನಾಗಲಿ ರೊಟ್ಟಿ ಗಡಂಗಿನ ಯಾ ಮಿಠಾಯಿ ಅಂಗಡಿಯ ಯಾವಭಾಗದ ನೆಲದಮೇಲೂ ಅಥವಾ ಗೋಡೆಗೆ ಸೇರಿಕೆಯಾಗಿಯೂ ಹಾಕಿರಕೂಡದು.

VII. ಸದರಿ ಆವರಣದಲ್ಲಿನ ಯಾ ಆಸ್‌ಪಾಸಿನಲ್ಲಿನ ಕಸ ಮತ್ತು ಕಶ್ಮಲವು ಚನ್ನಾಗಿ ಗುಡಿಸಲ್ಪಡುತ್ತಿರಬೇಕು ಮತ್ತು ವೊಹರಿಯನ್ನು ನೀರಿನಿಂದ ಚನ್ನಾಗಿ ಶುಭ್ರಪಡಿಸಬೇಕು. ಮತ್ತು ಸದರಿ ಆವರಣವನ್ನು ಸರ್ವಕಾಲದಲ್ಲೂ ನಿರ್ಮಲವಾದ ಮತ್ತು ಹಸನು ಯಾ ಶುಚಿಯಾದ ಸ್ಥಿತಿಯಲ್ಲಿಟ್ಟಿರಬೇಕು.

VIII. ಸಾಂಕ್ರಾಮಿಕವಾದ ಅಥವಾ ಅಸಹ್ಯಕರವಾದ ರೋಗದಿಂದ ಅನುಭವಿಸುವಂಥಾ ಅಥವಾ ಅಂಥಾ ರೋಗಿಷ್ಟನ ಹಾಜರಾತಿಯಲ್ಲಿ ಹೊಸದಾಗಿರುವ ಮನುಷ್ಯನನ್ನು ಅಥವಾ ವೈದ್ಯತೊಳೆಯದೇಲೂ ಯಾ ಬೇರೆರೀತಿಯಲ್ಲಿಯೂ ಅಶುಚಿಯಾದಂಥಾ ಯಾವ ಮನುಷ್ಯನನ್ನು ರೊಟ್ಟಿ ಗಡಂಗಿನಲ್ಲಾಗಲಿ ಮಿಠಾಯಿ ಅಂಗಡಿಯಲ್ಲಾಗಲಿ ನೌಕರಿ ಬಗ್ಗೆ ಇಟ್ಟುಕೊಳ್ಳಕೂಡದು. ಮತ್ತು ಹಿಟ್ಟು, ಸಾದಲು ನೇಮಿಸಲ್ಪಡುವಂಥಾ ವಿಶಿಷ್ಟರು ಅವರ ಶರೀರದ ಮುಂಭಾಗವನ್ನ ಸಂಪೂರ್ಣವಾಗಿ ಮುಚ್ಚುವ ರೀತ್ಯಾ ಕುತ್ತಿಗೆಯಿಂದ ಮೊಣಕಾಲಿನ ವರೆಗೆ ಬೆಳ್ಳಗಿರುವ ಮತ್ತು ಶುಭ್ರವಾದ ನಾರು ಅಥವಾ ಅರಳೇ ಬಟ್ಟೆಯನ್ನ ಧರಿಸಿಕೊಳ್ಳಬೇಕು.

IX. ರೊಟ್ಟಿ ಗಡಂಗು ಅಥವಾ ಮಿಠಾಯಿ ಅಂಗಡಿ ಎಂಬುವದು ಬೇಕರಿಗೋಸ್ಕರ ರೊಟ್ಟಿಯನ್ನು ಸುಡುವದಕ್ಕೂ ಸೇಪ ದಾರ್ಥಗಳನ್ನು ತಯಾರ್ಮಾಡುವುದಕ್ಕೂ ಉಪಯೋಗಿಸಲ್ಪಡುವ ಬಂದು ಕಟ್ಟಡ ಅಥವಾ ಅಂಥಾ ಕಟ್ಟಡದ ಒಂದು ಭಾಗ ಸೇರಿಕೊಂಡಿರುತ್ತದೆ.

X. ಯಾವ ಮನುಷ್ಯನು ರೊಟ್ಟಿಯನ್ನಾಗಲಿ ಮಿಠಾಯಿಯನ್ನಾಗಲಿ ಮುಚ್ಚಲ್ಪಟ್ಟ ಗಾಡಿ ಅಥವಾ ಮುಚ್ಚಳವುಳ್ಳ ಮಕ್ಕರಿ, ಟಿನ್ನು ಅಥವಾ ಇತರ ಆಕಯಗಳು ವಿನಹ ಬಂದು ಸ್ಥಳದಿಂದ ಇತರ ಯಾವ ಸ್ಥಳಕ್ಕೂ ಸಾಗಿಸಕೂಡದು ಅಂಥಾ ಪ್ರತಿ ಭಂಡಿಯೂ ಮಕ್ಕರಿಯೂ ಟಿನ್ನೂ ಅಥವಾ ಇತರ ಪಾತ್ರೆಗಳೂ ಸರ್ವದಾ ಸಂಪೂರ್ಣ ಶುಚಿಯಾಗಿ ಇಡಲ್ಪಟ್ಟಿರಬೇಕು. ಹಾಗೆ ಸಾಗಿಸಲ್ಪಡತಕ್ಕ ರೊಟ್ಟಿಯನ್ನಾಗಲಿ ಮಿಠಾಯಿಯಾಗಲಿ ಕೊಳೆ ಅಥವಾ ಅನಾರೋಗ್ಯವಾಗುವಂತೆ ಯಾವ ಕಾರ್ಯವೂ ನಡಿಸಕೂಡದು.

XI. ರೊಟ್ಟಿ-ಮಿಠಾಯಿ ವಗೈರೆ ಕಟ್ಟಲು ಉಪಯೋಗಿಸತಕ್ಕ ಕಾಗದಗಳು ಮತ್ತು ಹಚ್ಚಿಟ ಎತೆಗಳು ವಿಶಿಷ್ಟವೆ ಶುಚಿಯಾಗಿರಬೇಕಲ್ಲದೆ ಅವುಗಳು ನಿರ್ಮಲವಾದ (ಗಡಗಂಚಿ) ಹಂದರದಲ್ಲಿ ದಾಸ್ತಾನಿಟ್ಟಿರಬೇಕು.